ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ
ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ
'ವಿಜ್ಞಾನ ಭವನ' 24/2, 21ನೇ ಮುಖ್ಯ ರಸ್ತೆ, ಬನಶಂಕರಿ, 2ನೇ ಹಂತ, ಬೆಂಗಳೂರು
ದೂ. 080-26712789; ಫ್ಯಾಕ್ಸ್ – 080-26711160

# 2014-'15ನೇ ಸಾಲಿನ ವಾರ್ಷಿಕ ವರದಿ

ಕರ್ನಾಟಕ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಅಂಗಸಂಸ್ಥೆಯಾದ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯು (ಕವಿತಂಅ) ಖ್ಯಾತ ಬಾಹ್ಯಾಕಾಶ ವಿಜ್ಞಾನಿ ಪ್ರೊ. ಯು. ಆರ್. ರಾವ್‌ರವರ ಅಧ್ಯಕ್ಷತೆಯಲ್ಲಿ ಕಾರ್ಯನಿರ್ವಹಿಸುತ್ತಿದೆ. ಅಕಾಡೆಮಿಯು ಮೂಲ ವಿಜ್ಞಾನವನ್ನು ಸದೃಢಗೊಳಸುವ ಹಾಗೂ ಪ್ರೌಢಶಾಲೆಯಿಂದ ವಿಶ್ವವಿದ್ಯಾನಿಲಯದವರೆಗಿನ ವಿವಿಧ ಶೈಕ್ಷಣಿಕ ಹಂತಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಅರಿವು ಮೂಡಿಸುವ ಹಾಗೂ ವಿಜ್ಞಾನ ಪ್ರಸರಣಕ್ಕೆ ಪೂರಕವಾಗುವ ಕೆಳಕಂಡ ಕಾರ್ಯಕ್ರಮಗಳನ್ನು 2014-'15ನೇ ಸಾಲಿನಲ್ಲಿ ರಾಜ್ಯಾದ್ಯಂತ ಬಹಳ ಯಶಸ್ವಿಯಾಗಿ ಆಯೋಜಿಸಿದೆ:

## 1.0 ವಿಜ್ಞಾನ ಲೋಕ ಸಂಚಿಕೆ ಪ್ರಕಟಣೆ

ಅಕಾಡೆಮಿಯು "ವಿಜ್ಞಾನ ಲೋಕ" ದ್ವೈಮಾಸಿಕ ಸಂಚಿಕೆಯನ್ನು 2007 ರಿಂದ ನಿರಂತರವಾಗಿ ಪ್ರಕಟಿಸುತ್ತಿದೆ. 2014-'15ನೇ ಸಾಲಿನಲ್ಲಿ ಸದರಿ ದ್ವೈಮಾಸಿಕದ 5 ಸಂಚಿಕೆಗಳನ್ನು 2014ರ ಏಪ್ರಿಲ್, ಜೂನ್, ಆಗಸ್ಟ್, ಅಕ್ಟೋಬರ್ ಹಾಗೂ 2015ರ ಜನವರಿ ಮಾಹೆಗಳಲ್ಲಿ ಪ್ರತಿ ಸಂಚಿಕೆಯ ತಲಾ 2000 ಪ್ರತಿಗಳನ್ನು ಮುದ್ರಿಸಿ, ರಾಜ್ಯದ ವಿವಿಧ ವಿಜ್ಞಾನ ಪದವಿ ಪೂರ್ವ ಮತ್ತು ವಿಜ್ಞಾನ ಪದವಿ ಕಾಲೇಜುಗಳಿಗೆ, ವಿಜ್ಞಾನ ಕೇಂದ್ರಗಳಿಗೆ, ಗ್ರಂಥಾಲಯಗಳಿಗೆ ಹಾಗೂ ಇನ್ನಿತರೆ ಸಂಸ್ಥೆಗಳಿಗೆ ಉಚಿತವಾಗಿ ಕಳುಹಿಸಿ ಕೊಡಲಾಗಿದೆ. ಮಾರ್ಚ್ 2015ರ ಸಂಚಿಕೆಯನ್ನು ಸದ್ಯದಲ್ಲೇ ಪ್ರಕಟಿಸಲಾಗುವುದು.

## 2.0 ವಿಜ್ಞಾನ ಪದವಿ ವಿದ್ಯಾರ್ಥಿಗಳಿಗೆ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ಶಿಷ್ಯವೇತನ

### 2.1 ಅಕಾಡೆಮಿ ಶಿಷ್ಯವೇತನ

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ಶಿಷ್ಯವೇತನವನ್ನು ಮಾಹೆಯಾನ ರೂ. 1000/- ಗಳಂತೆ (10 ತಿಂಗಳವರೆಗೆ ರೂ. 10,000/- ಗಳು) ಬೆಂಗಳೂರು, ಕುವೆಂಪು, ಮಂಗಳೂರು, ಮೈಸೂರು, ತುಮಕೂರು, ದಾವಣಗೆರೆ, ಕರ್ನಾಟಕ, ಗುಲ್ಬರ್ಗಾ, ರಾಣಿ ಚೆನ್ನಮ್ಮ, ಶ್ರೀ ವಿಜಯನಗರ ಕೃಷ್ಣದೇವರಾಯ ಹಾಗೂ ಕ್ರೈಸ್ಟ್ ವಿಶ್ವವಿದ್ಯಾಲಯಗಳ ವ್ಯಾಪ್ತಿಯಲ್ಲಿ ಬರುವ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿಜ್ಞಾನ ಪದವಿ ವಿದ್ಯಾರ್ಥಿಗಳಿಗೆ ನೀಡಲಾಗುತ್ತಿದೆ.

### 2.2 ವಿಶೇಷ ಅಭಿವೃದ್ಧಿ ಯೋಜನೆಯಡಿ (SDP) ಶಿಷ್ಯವೇತನ

ಪ್ರಾದೇಶಿಕ ಅಸಮತೋಲನಕ್ಕೆ ಸಂಬಂಧಿಸಿದ ಡಾ. ಡಿ. ಎಂ. ನಂಜುಂಡಪ್ಪ ಸಮಿತಿಯು ಗುರುತಿಸಿರುವ ಹಿಂದುಳಿದ ತಾಲ್ಲೂಕುಗಳಲ್ಲಿ ವಿಜ್ಞಾನ ಪದವಿಯಲ್ಲಿ ವ್ಯಾಸಂಗಮಾಡುತ್ತಿರುವ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ನೀಡಲು ಶಿಷ್ಯವೇತನವನ್ನು ಮಾಹೆಯಾನ ರೂ. 1000/- ರಂತೆ (10 ತಿಂಗಳವರೆಗೆ ರೂ. 10,000/- ಪ್ರತಿ ವಿದ್ಯಾರ್ಥಿಗೆ) ಕಲ್ಬುರ್ಗಿ (188 ಶಿಷ್ಯವೇತನಗಳು); ಬೆಳಗಾಂ (450 ಶಿಷ್ಯವೇತನಗಳು); ಬೆಂಗಳೂರು (225ಶಿಷ್ಯವೇತನಗಳು) ಹಾಗೂ ಮೈಸೂರು (225 ಶಿಷ್ಯವೇತನಗಳು) ಜಿಲ್ಲೆಗಳ ಒಟ್ಟು 1088 ವಿದ್ಯಾರ್ಥಿಗಳಿಗೆ ನೀಡಲಾಗಿದೆ.

## 3.0 ಸ್ನಾತಕೋತ್ತರ ವಿಜ್ಞಾನ ವಿದ್ಯಾರ್ಥಿಗಳಿಗೆ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ಶಿಷ್ಯವೇತನ

ಸ್ನಾತಕೋತ್ತರ ವಿಜ್ಞಾನ ವಿದ್ಯಾರ್ಥಿಗಳಿಗೆ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ಶಿಷ್ಯವೇತನವನ್ನು ಮಾಹೆಯಾನ ರೂ. 1500/- ಗಳಂತೆ (10 ತಿಂಗಳವರೆಗೆ ರೂ. 15,000/-) ಒಂದು ವಿಶ್ವವಿದ್ಯಾನಿಲಯಕ್ಕೆ 10 ಶಿಷ್ಯವೇತನವನ್ನು ಪ್ರತಿ ಮೂಲ ವಿಜ್ಞಾನ ವಿಭಾಗಕ್ಕೆ 2 ರಂತೆ ಸ್ನಾತಕೋತ್ತರ ಪದವಿಯ ಎರಡು ವರ್ಷಗಳ ಅವಧಿಯವರೆಗೆ ನೀಡಲಾಗುತ್ತಿದೆ. 2014-'15ನೇ ಸಾಲಿನಲ್ಲಿ ಒಟ್ಟು 200 ಅರ್ಹ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಶಿಷ್ಯವೇತನವನ್ನು (ಪ್ರಥಮ ವರ್ಷ – 105 ಸಂಖ್ಯೆ & ದ್ವಿತೀಯ ವರ್ಷ 95 ಸಂಖ್ಯೆ) ಪ್ರಸಕ್ತ ಸಾಲಿನಲ್ಲಿ ನೀಡಲಾಗಿದೆ.

## 4.0 ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ವಿಶೇಷ ಉಪನ್ಯಾಸ ಮಾಲೆ ಕಾರ್ಯಕ್ರಮ ಮತ್ತು ಕಾರ್ಯಾಗಾರಗಳು

2014-'15ನೇ ಸಾಲಿನಲ್ಲಿ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ವಿಜ್ಞಾನ ವಿಶೇಷ ಉಪನ್ಯಾಸ ಮಾಲೆ ಕಾರ್ಯಕ್ರಮಗಳನ್ನು (i) ಮೈಸೂರು ವಿಶ್ವವಿದ್ಯಾಲಯ (ಭೂ ವಿಜ್ಞಾನ); (ii) ಮಂಗಳೂರು ವಿಶ್ವವಿದ್ಯಾಲಯ (ಪರಿಸರ ವಿಜ್ಞಾನ); (iii) ಗುಲ್ಬರ್ಗಾ ವಿಶ್ವವಿದ್ಯಾಲಯ (ಸೂಕ್ಷ್ಮ ಜೀವಿ ವಿಜ್ಞಾನ); (iv) ಕರ್ನಾಟಕ ವಿಶ್ವವಿದ್ಯಾನಿಲಯ (ಗಣಿತ ವಿಜ್ಞಾನ) ಮತ್ತು (v) ಕೆ.ಎಸ್. ಹೆಗಡೆ ಅಕಾಡೆಮಿ, ದೇರಲಕಟ್ಟೆ (ಆಣ್ವಿಕ ತಳಶಾಸ್ತ್ರ) ಇವುಗಳಲ್ಲಿ ಯಶಸ್ವಿಯಾಗಿ ನಡೆಸಲಾಗಿದ್ದು, (vi) ಬೆಂಗಳೂರು ವಿಶ್ವವಿದ್ಯಾಲಯದಲ್ಲಿ (ಭೌತ ವಿಜ್ಞಾನ) 2015ರ ಫೆಬ್ರವರಿ ಮಾಹೆಯಲ್ಲಿ ನಡೆಸಲಾಗುವುದು.

ಅಲ್ಲದೇ, ವಿಜ್ಞಾನ ವಿಶೇಷ ಕಾರ್ಯಾಗಾರಗಳನ್ನು (i) ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾನಿಲಯ, ಬಳ್ಳಾರಿ (ಗಣಿತ) (ii) ಮೀನುಗಾರಿಕಾ ಮಹಾವಿದ್ಯಾನಿಲಯ, ಮಂಗಳೂರು (ಸಮಗ್ರ ಕರಾವಳ ವಲಯ ನಿರ್ವಹಣೆ); (iii ) ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು (ಜೈವಿಕ ತಂತ್ರಜ್ಞಾನ); (iv) ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ (ಭೌತ ವಿಜ್ಞಾನ); (v) ಜೈನ್ ವಿಶ್ವವಿದ್ಯಾಲಯ, ಬೆಂಗಳೂರು (ಗಣಿತ) ಹಾಗೂ (vi) ಕ್ರೈಸ್ಟ್ ವಿಶ್ವವಿದ್ಯಾನಿಲಯ, ಬೆಂಗಳೂರು (ಭೌತ ವಿಜ್ಞಾನ) ಇವುಗಳಲ್ಲಿ ಯಶಸ್ವಿಯಾಗಿ ನಡೆಸಲಾಗಿದ್ದು, (vii) ಅರಣ್ಯ ಮಹಾವಿದ್ಯಾಲಯ, ಪೊನ್ನಂಪೇಟೆಯಲ್ಲಿ (ಅರಣ್ಯ ವಿಜ್ಞಾನ) 2015ರ ಫೆಬ್ರವರಿ ಮಾಹೆಯಲ್ಲಿ ನಡೆಸಲಾಗುವುದು.

## 5.0 ರಾಷ್ಟ್ರೀಯ ವಿಜ್ಞಾನ ದಿನಾಚರಣೆ

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ವತಿಯಿಂದ ರಾಷ್ಟ್ರೀಯ ವಿಜ್ಞಾನ ದಿನವನ್ನು ಫೆಬ್ರವರಿ ಮಾಹೆಯಲ್ಲಿ ಸರ್ ಸಿ. ವಿ. ರಾಮನ್‌ರವರವರಿಗೆ ನೊಬೆಲ್ ಪಾರಿತೋಷಕವನ್ನು ತಂದು ಕೊಟ್ಟ ಶ್ರೇಷ್ಠ ಸಂಶೋಧನೆ **" ರಾಮನ್ ಪರಿಣಾಮವನ್ನು"** ಪ್ರತಿಪಾದಿಸಿದ ದಿನದ ಸ್ಮರಣಾರ್ಥ ಪ್ರತಿ ವರ್ಷ ಆಯೋಜಿಸಲಾಗುತ್ತಿದೆ. ಅಕಾಡೆಮಿಯು ಬೆಂಗಳೂರು ಮತ್ತು ರಾಜ್ಯದ ವಿವಿಧ ಜಿಲ್ಲೆಗಳಲ್ಲಿ / ತಾಲ್ಲೂಕುಗಳಲ್ಲಿ **"ರಾಷ್ಟ್ರ ನಿರ್ಮಾಣದಲ್ಲಿ ವಿಜ್ಞಾನ" (Science for Nation Building)** ಎಂಬ ಕೇಂದ್ರ ವಿಷಯದಡಿ ಪ್ರಥಮ ದರ್ಜೆ ವಿಜ್ಞಾನ ಕಾಲೇಜು, ವಿಜ್ಞಾನ ಕೇಂದ್ರಗಳು ಹಾಗೂ ಸಂಘ-ಸಂಸ್ಥೆಗಳ ಸಹಯೋಗದೊಂದಿಗೆ ರಾಜ್ಯಾದ್ಯಂತ ಆಯೋಜಿಸಲಾಗುವುದು.

## 6.0 ವಿಜ್ಞಾನ & ತಂತ್ರಜ್ಞಾನ, ಕೃಷಿ ಮತ್ತು ವೈದ್ಯಕೀಯ ವಿಜ್ಞಾನ ಕ್ಷೇತ್ರಗಳ ಲೇಖಕರಿಗೆ ಪ್ರಶಸ್ತಿ

ಕನ್ನಡದಲ್ಲಿ ವಿಜ್ಞಾನ, ತಂತ್ರಜ್ಞಾನ, ಕೃಷಿ ಮತ್ತು ವೈದ್ಯಕೀಯ ಕ್ಷೇತ್ರಗಳ ಪುಸ್ತಕಗಳನ್ನು ಪ್ರಕಟಿಸಲು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಅಕಾಡೆಮಿಯು ಆಯ್ದ ಅತ್ಯುತ್ತಮವಾದ ಕನ್ನಡ ಪುಸ್ತಕಗಳಿಗೆ ಪ್ರಶಸ್ತಿಯನ್ನು ನೀಡುತ್ತಿದೆ. 2014–'15ನೇ ಸಾಲಿನಲ್ಲಿ ಒಟ್ಟು 58 ಪುಸ್ತಕಗಳನ್ನು ಸಲ್ಲಿಸಿದ್ದು, ಅವುಗಳನ್ನು ಆಯಾ ಕ್ಷೇತ್ರದ ಪರಿಣತರಿಂದ ಮೌಲ್ಯಮಾಪನ ಮಾಡಿಸಲಾಗುವುದು. ಪ್ರತಿ ವಿಭಾಗ/ವಿಷಯಗಳ ಅತ್ಯುತ್ತಮವಾದ 2 ಪುಸ್ತಕಗಳಿಗೆ ತಲಾ ರೂ. 25,000/- ನಗದು ಬಹುಮಾನವನ್ನು ನೀಡಿ, ಪ್ರಶಸ್ತಿ ವಿಜೇತ ಪುಸ್ತಕಗಳ ಲೇಖಕರನ್ನು ಸನ್ಮಾನಿಸಲಾಗುವುದು.

## 7.0 ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಏಳನೇ ಸಮ್ಮೇಳನ

ಕರ್ನಾಟಕ ವಿಜ್ಞಾನ ತಂತ್ರಜ್ಞಾನ ಅಕಾಡೆಮಿಯ ಏಳನೇ ಸಮ್ಮೇಳನವನ್ನು ಬೆಂಗಳೂರಿನ ಆಕ್ಸ್‌ಫರ್ಡ್ ವಿಜ್ಞಾನ ಕಾಲೇಜಿನ ಸಹಯೋಗದೊಂದಿಗೆ 2015ರ ಫೆಬ್ರವರಿ 5 ಮತ್ತು 6 ರಂದು "ವಿಜ್ಞಾನ, ತಂತ್ರಜ್ಞಾನ ಮತ್ತು ಉತ್ಪನ್ನೀಕರಣ – ಬೆಳವಣಿಗೆಗೆ ಒಂದು ಸಾಧನ" **(**Science, Technology & Productisation: A Means for Growth**)** ಎಂಬ ಕೇಂದ್ರ ವಿಷಯದಡಿ ಆಯೋಜಿಸಲಾಯಿತು. ಈ ಸಮ್ಮೇಳನದ ತಾಂತ್ರಿಕ ಗೋಷ್ಠಿಯಲ್ಲಿ ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳಿಗೆ ಸಂಬಂಧಿಸಿದ ವಿಷಯಗಳ ಮೇಲೆ ಖ್ಯಾತ ವಿಜ್ಞಾನಿಗಳು, ವಿಷಯ ತಜ್ಞರು ಮತ್ತು ಪರಿಣತರಿಂದ ಪಾಂಡಿತ್ಯ ಪೂರ್ಣ ಉಪನ್ಯಾಸಗಳನ್ನು ಏರ್ಪಡಿಸಲಾಗಿತ್ತು. **ಅಕಾಡೆಮಿಯ ಜೀವಮಾನ ಸಾಧನೆ ಪ್ರಶಸ್ತಿ**ಯನ್ನು ದೇಶದ ರಕ್ಷಣಾ ಸಂಶೋಧನೆಗೆ ಅನನ್ಯ ಕೊಡುಗೆಯನ್ನು ನೀಡಿರುವ **ಖ್ಯಾತ ವಿಜ್ಞಾನಿ ಪದ್ಮಭೂಷಣ ಡಾ**. **ವಾಸುದೇವ್**. **ಕೆ. ಆತ್ರೆ,** ರಕ್ಷಣಾ ಸಚಿವರ ನಿವೃತ್ತ ವೈಜ್ಞಾನಿಕ ಸಲಹೆಗಾರರು ಇವರಿಗೆ ನೀಡಿ ಸನ್ಮಾನಿಸಲಾಯಿತು.

ರಾಜ್ಯದ ವಿವಿಧ ವಿಶ್ವವಿದ್ಯಾನಿಲಯ ಹಾಗೂ ಕಾಲೇಜುಗಳ ಪ್ರತಿನಿಧಿಗಳು/ಸಂಶೋಧನಾ ವಿದ್ಯಾರ್ಥಿಗಳು, ಉಪನ್ಯಾಸಕರು, ಪ್ರಾಧ್ಯಾಪಕರು, ವಿಜ್ಞಾನಿಗಳು, ಸರ್ಕಾರದ ವಿವಿಧ ಇಲಾಖೆಗಳ ಅಧಿಕಾರಿಗಳು, ಸರ್ಕಾರೇತರ ಸಂಘ ಸಂಸ್ಥೆಗಳ ಪ್ರತಿನಿಧಿಗಳು ಮತ್ತು ಆಸಕ್ತ ಸಾರ್ವಜನಿಕರನ್ನು ಒಳಗೊಂಡ ಸುಮಾರು 900 ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಅಕಾಡೆಮಿಯು ವೈಜ್ಞಾನಿಕ ಸಂಶೋಧನೆಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಏರ್ಪಡಿಸಿದ್ದ ಪ್ರಾತ್ಯಕ್ಷಿಕೆಗಳ ಪ್ರದರ್ಶನದಲ್ಲಿ 250 ಕ್ಕೂ ಹೆಚ್ಚು ಪ್ರಾತ್ಯಕ್ಷಿಕೆಗಳನ್ನು ಪ್ರದರ್ಶಿಸಲಾಯಿತು. ಅವುಗಳಲ್ಲಿ ತಜ್ಞ ಸಮಿತಿಯು ಆಯ್ಕೆ ಮಾಡಿದ ಅತ್ಯುತ್ತಮವಾದ ಪ್ರಾತ್ಯಕ್ಷಿಕೆಗಳಿಗೆ ನಗದು ಬಹುಮಾನವನ್ನು ನೀಡಲಾಯಿತು. ಈ ಸಂದರ್ಭದಲ್ಲಿ ಆಯ್ದ ಪ್ರಾತ್ಯಕ್ಷಿಕೆಗಳ ಸಾರಾಂಶವನ್ನು ಹೊಂದಿದ ಪುಸ್ತಕವನ್ನು ಹೊರತರಲಾಯಿತು.

## 8.0 ವಿಜ್ಞಾನ ಪದವಿ ವಿದ್ಯಾರ್ಥಿಗಳಿಗೆ ಮುಕ್ತ ಉಪನ್ಯಾಸ ಮಾಲೆ ಕಾರ್ಯಕ್ರಮ

ವಿಜ್ಞಾನ ಪದವಿ ವಿದ್ಯಾರ್ಥಿಗಳಿಗೆ ಒಟ್ಟು 10 ಮುಕ್ತ ಉಪನ್ಯಾಸ ಮಾಲೆ ಕಾರ್ಯಕ್ರಮಗಳನ್ನು ರಾಜ್ಯದ ವಿವಿಧೆಡೆ ವಿಜ್ಞಾನ ಪದವಿ ಕಾಲೇಜುಗಳ ಮತ್ತು ವಿಜ್ಞಾನ ಕೇಂದ್ರಗಳ ಸಹಯೋಗದೊಂದಿಗೆ ಆಯೋಜಿಸಲಾಗುತ್ತಿದೆ.

## 9.0 ವಿಜ್ಞಾನ ಮತ್ತು ಇಂಜಿನಿಯರಿಂಗ್ ಅಧ್ಯಾಪಕರುಗಳಿಗೆ ಕಾರ್ಯಾಗಾರ

ನಾಲ್ಕು ತರಬೇತಿ ಕಾರ್ಯಾಗಾರಗಳನ್ನು ವಿಜ್ಞಾನ ಮತ್ತು ಇಂಜಿನಿಯರಿಂಗ್ ಪದವಿ ಕಾಲೇಜುಗಳ ಅಧ್ಯಾಪಕರುಗಳಿಗೆ 2014-'15 ರಲ್ಲಿ ಯೋಜಿಸಲಾಗಿದೆ. ಅವುಗಳಲ್ಲಿ 2 ತರಬೇತಿ ಕಾರ್ಯಾಗಾರಗಳನ್ನು ಭೂಗೋಳ ಶಾಸ್ತ್ರ ವಿಭಾಗ, ಬೆಂಗಳೂರು ವಿಶ್ವವಿದ್ಯಾನಿಲಯ (GIS, Remote Sensing and GPS) ಮತ್ತು ಸಿದ್ಧಾರ್ಥ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ತುಮಕೂರು (Digital Image Processing) ಇವರ ಸಹಯೋಗದೊಂದಿಗೆ ಯಶಸ್ವಿಯಾಗಿ ಆಯೋಜಿಸಲಾಗಿದೆ. ಇನ್ನುಳಿದ ಎರಡು ತರಬೇತಿ ಕಾರ್ಯಾಗಾರಗಳನ್ನು ಸ್ಕೂಲ್ ಆಫ್ ಅರ್ಥ್ ಸೈನ್ಸಸ್, ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾನಿಲಯ, ಕಲ್ಬುರ್ಗಿ (Real-time Application of Geospatial Technology with Hands on Training) ಹಾಗೂ ಭೂಗೋಳ ಶಾಸ್ತ್ರ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ (Geo-informatics) ಇವರ ಸಹಯೋಗದೊಂದಿಗೆ ಆಯೋಜಿಸಲು ಪೂರ್ವಸಿದ್ಧತೆಯನ್ನು ಮಾಡಿಕೊಳ್ಳಲಾಗುತ್ತಿದೆ.

## 10.0 ಅಲ್ಪ ಮೊತ್ತದ ಅನುದಾನ

ವಿವಿಧ ಶೈಕ್ಷಣಿಕ ಸಂಸ್ಥೆಗಳು, ವಿಶ್ವವಿದ್ಯಾನಿಲಯಗಳು ಹಾಗೂ ಇತರೆ ಸಂಘ ಸಂಸ್ಥೆಗಳು ಈ ಕಾರ್ಯಕ್ರಮದಡಿ ಕಾರ್ಯಾಗಾರ, ಸಮ್ಮೇಳನ, ವಿಚಾರಗೋಷ್ಠಿ ಇತ್ಯಾದಿಗಳ ಆಯೋಜನೆಗೆ ಅನುದಾನ ಕೋರಿ ಸಲ್ಲಿಸಲಾಗಿದ್ದ ಪ್ರಸ್ತಾವನೆಗಳನ್ನು ಪ್ರೊ. ಕೆ. ಎಂ. ಕಾವೇರಿಯಪ್ಪ, ವಿಶ್ರಾಂತ ಕುಲಪತಿಗಳು, ಮಂಗಳೂರು ವಿಶ್ವವಿದ್ಯಾನಿಲಯ ಇವರ ಅಧ್ಯಕ್ಷತೆಯ ಉಪಸಮಿತಿಯು ಮೌಲ್ಯ ಮಾಪನ ಮಾಡಿ ಶಿಫಾರಸ್ಸು ಮಾಡಿದ 48 ಪ್ರಸ್ತಾವನೆಗಳಿಗೆ ರೂ. 5,000/- ಗಳಿಂದ ರೂ. 50,000/- ವರೆಗೆ ಅನುದಾನವನ್ನು ನೀಡಲಾಗಿದೆ.

## 11.0 ವಿಜ್ಞಾನ ಕೇಂದ್ರದ ಸ್ಥಾಪನೆ

ಚಾಮರಾಜನಗರ ಜಿಲ್ಲೆಯ ಬಿಳಿಗಿರಿರಂಗನ ಬೆಟ್ಟದಲ್ಲಿ ಸ್ವಾಮಿ ವಿವೇಕಾನಂದ ಗಿರಿಜನ ಕಲ್ಯಾಣ ಕೇಂದ್ರದ ಪ್ರೌಢಶಾಲೆಯಲ್ಲಿ ಅಕಾಡೆಮಿಯ ಅನುದಾನದಲ್ಲಿ ಕಳೆದ ವರ್ಷ ಸ್ಥಾಪಿಸಿದ್ದ ವಿಜ್ಞಾನ ಕೇಂದ್ರವನ್ನು ಮತ್ತಷ್ಟು ಸದೃಢಗೊಳಿಸಲು 2014-'15ನೇ ಸಾಲಿನಲ್ಲಿ ರೂ. 5.00 ಲಕ್ಷಗಳ ಹೆಚ್ಚುವರಿ ಅನುದಾನವನ್ನು ನೀಡಲಾಯಿತು.

## 12.0 ಅಕಾಡೆಮಿ ಪ್ರಾದೇಶಿಕ ಸಮ್ಮೇಳನಗಳು

(1) 2014-'15ರಲ್ಲಿ ಅಕಾಡೆಮಿಯು ನಾಲ್ಕು ಪ್ರಾದೇಶಿಕ ಸಮ್ಮೇಳನಗಳನ್ನು ಆಯೋಜಿಸಿದ್ದು, ವಿವರ ಕೆಳಕಂಡಂತಿದೆ:

**(i) ಅಕಾಡೆಮಿ ಅನುದಾನದಡಿ ಆಯೋಜಿಸಿದ ಸಮ್ಮೇಳನಗಳು:**

| ಕ್ರ. ಸಂ | ಆಯೋಜಕ ಸಂಸ್ಥೆ | ಸಮ್ಮೇಳನದ ಕೇಂದ್ರ ವಿಷಯ | ಆಯೋಜಿಸಿದ ದಿನಾಂಕ |
|---|---|---|---|
| 1 | ಪೂರ್ಣಪ್ರಜ್ಞ ವಿಜ್ಞಾನ ಕಾಲೇಜು, ಉಡುಪಿ | ಪರಿಸರ : ಉದ್ಭವಿಸುತ್ತಿರುವ ಸಮಸ್ಯೆಗಳು | 9 – 10 ಜನವರಿ 2015 |

(ii) **ವಿಶೇಷ ಅಭಿವೃದ್ಧಿ ಯೋಜನೆಯಡಿ ಆಯೋಜಿಸಿದ ಸಮ್ಮೇಳನಗಳು:**

| ಕ್ರ. ಸಂ | ಆಯೋಜಕ ಸಂಸ್ಥೆ | ಸಮ್ಮೇಳನದ ಕೇಂದ್ರ ವಿಷಯ | ಆಯೋಜಿಸಿದ ದಿನಾಂಕ |
|---|---|---|---|
| 1 | ವೀರಶೈವ ವಿಜ್ಞಾನ ಕಾಲೇಜು, ಬಳ್ಳಾರಿ | ವಿಜ್ಞಾನ ಮತ್ತು ಸಮಾಜ | 16 – 17 ಜನವರಿ 2015 |
| 2 | ಕರ್ನಾಟಕ ಕೇಂದ್ರಿಯ ವಿಶ್ವವಿದ್ಯಾನಿಲಯ, ಕಲ್ಬುರ್ಗಿ | ವಿಕೋಪ ನಿರ್ವಹಣೆಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ | 23 – 24 ಜನವರಿ 2015 |
| 3 | ಬಿ.ಎಲ್.ಡಿ.ಇ. ವಿಶ್ವವಿದ್ಯಾನಿಲಯ, ಬಿಜಾಪುರ | ಆಹಾರ ಮತ್ತು ಪೋಷಣೆಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ | 20 – 21 ಫೆಬ್ರವರಿ 2015 |

## 13.0 ಶಿಕ್ಷಕರ ಪುನಶ್ಚೇತನಾ ಕಾರ್ಯಾಗಾರ

2014–'15ನೇ ಸಾಲಿನಲ್ಲಿ ಪ್ರೌಢಶಾಲಾ ಶಿಕ್ಷಕರಿಗೆ ತರಬೇತಿ ಕಾರ್ಯಾಗಾರಗಳನ್ನು ವಿಜ್ಞಾನ ಮತ್ತು ಗಣಿತ ವಿಷಯಗಳಲ್ಲಿ ಐದು ಸಂಸ್ಥೆಗಳ ಸಹಯೋಗದೊಂದಿಗೆ ಯಶಸ್ವಿಯಾಗಿ ಆಯೋಜಿಸಲಾಗಿದೆ. ಅವುಗಳೆಂದರೆ : (1) ವಿವೇಕಾನಂದ ಯೂತ್ ಮೂವ್‌ಮೆಂಟ್, ಹೆಚ್.ಡಿ. ಕೋಟೆ, ಮೈಸೂರು; (2) ಸ್ವಾಮಿ ವಿವೇಕಾನಂದ ಗಿರಿಜನ ಕಲ್ಯಾಣ ಕೇಂದ್ರ, ಬಿಳಿಗಿರಿರಂಗನ ಬೆಟ್ಟ; (3) ಪ್ರಾದೇಶಿಕ ವಿಜ್ಞಾನ ಕೇಂದ್ರ, ಧಾರವಾಡ; (4) ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರ, ಮಂಗಳೂರು ಹಾಗೂ (5) ರಾಯಚೂರು ಉಪಪ್ರಾದೇಶಿಕ ವಿಜ್ಞಾನ ಕೇಂದ್ರ, ರಾಯಚೂರು.